ಆ) ಬೆಂಗಳೂರು ಎತ್ತರಿಸಿದ ಹಗುರ ರೈಲು ವ್ಯವಸ್ಥೆಯನ್ನು ಆಳದ ಸಲು 1994ರಲ್ಲಿ ಯೋಜಿಸಲಾಯಿತು ಹಾಗೂ ಜನವರಿ 1995ರಲ್ಲಿ ಈ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿತು.

ಆ) ವರ್ಷ	**ಕೋಟಿ ರೂ.ಗಳಲ್ಲಿ**
1995-96ರಲ್ಲಿ	ರೂ. 47-128
1996-97ರಲ್ಲಿ (ಜನವರಿ 97ರ ತನಕ)	ರೂ. 38-228
ಒಟ್ಟು ಮೊತ್ತ	**ರೂ. 85-356**

ಇ) ದಿನಾಂಕ 15-1-97ರಂದು ಯು. ಬಿ. ಗ್ರೂಪ್ ಕನ್ ಸೋರಷಿಯಮ್‌ಯೊಂದಿಗೆ ರಾಜ್ಯ ಸರ್ಕಾರ ಬಿ.ಎಮ್.ಆರ್.ಟಿ.ಎಲ್. ಸಂಸ್ಥೆಯು ಪೂರ್ವಭಾವಿ ಒಪ್ಪಂದಕ್ಕೆ ಸಹಿ ಹಾಕಿದೆ. ಯು.ಬಿ.ಜಿ.ಸಿ. ಸಂಸ್ಥೆಯು ಪೂರ್ವ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರಾರಂಭಿಸಿದ್ದು ಪ್ರಾಜೆಕ್ಟ್ ಅಭಿವೃದ್ಧಿ ಯೋಜನೆಯನ್ನು ಸಲ್ಲಿಸಿರುವರು.ಈ ಸಂಸ್ಥೆಯು ತಾಂತ್ರಿಕ ಆರ್ಥಿಕ ಮತ್ತು ವಾಣಿಜ್ಯ ದೃಷ್ಠಿಗಳಿಂದ ಪ್ರಾಜೆಕ್ಟಿನ ಕಾರ್ಯಸಾಧ್ಯತೆ ಅಧ್ಯಯನ ನಡೆಸಿ ಸವಿಸ್ತಾರವಾದ ಪ್ರಾಜೆಕ್ಟಿನ ಯೋಜನಾ ವರದಿಯನ್ನು 1997ರ ಕೊನೆಯಲ್ಲಿ ಸಲ್ಲಿಸುವರು ಮತ್ತು ಇದನ್ನು ಒಪ್ಪಿಕೊಂಡ ಪಕ್ಷದಲ್ಲಿ 1993ನೇ ಮಾರ್ಚ್ ತಿಂಗಳಲ್ಲಿ ರಿಯಾಯಿತಿ ಒಪ್ಪಂದಕ್ಕೆ ಸಹಿ ಹಾಕಲಾಗುವುದು ಹಾಗೂ ಮೊದಲನೆ ಹಂತದ ನಿರ್ಮಾಣವು 1999 ರಲ್ಲಿ ಪ್ರಾರಂಭಿಸಿ 2002ನೇ ಸಾಲಿನಲ್ಲಿ ಪೂರ್ಣಗೊಳಿಸಬಹುದಾಗಿರುತ್ತದೆ.

ಈ) ಯೋಚಿಸಿರುವಂತೆ 1ನೇ ಹಂತದ ನಿರ್ಮಾಣ ಕಾರ್ಯವು 1999ನೇ ಸಾಲಿನ ಮಧ್ಯಭಾಗದಲ್ಲಿ ಪ್ರಾರಂಭವಾಗಿ 2002ನೇ ಸಾಲಿನ ಮಧ್ಯಭಾಗದಲ್ಲಿ ಅಂತ್ಯಗೊಳಿಸಲು ಉದ್ದೇಶಿಸಲಾಗಿದೆ. 4 ಹಂತಗಳಿರುವ ಸಂಪೂರ್ಣ ಯೋಜನೆಯನ್ನು 2007-2008 ನೇ ಸಾಲಿನಲ್ಲಿ ಪೂರ್ಣ ಗೊಳಿಸುವ ಉದ್ದೇಶವಿರುತ್ತದೆ.

ವಿಷಯ : ಮೈಸೂರು ಎಲೆಕ್ಟ್ರಿಕ್ ಇಂಡಸ್ಟ್ರೀಸ್ ಕುರಿತು

1467 (1906)-ಶ್ರೀ ಎಸ್. ಸುರೇಶ್ ಕುಮಾರ. (ರಾಜಾಜಿನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಆ) ಮೈಸೂರು ಎಲೆಕ್ಟ್ರಿಕ್ ಇಂಡಸ್ಟ್ರೀಸ್ (ಎಂಇವಿ) ಕಾರ್ಖಾನೆ ಯಾವಾಗ ಪ್ರಾರಂಭವಾಯಿತು

ಆ) ಈ ಕಾರ್ಖಾನೆಯಲ್ಲಿರುವ ಕಾರ್ಮಿಕರ ಸಂಖ್ಯೆ ಎಷ್ಟು

ಇ) 1993-94, 1994-95, 1995-96, 1996-97ರ ಸಾಲಿನ ಈ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ವಿವರಗಳನ್ನು ನೀಡುವುದು.

ಈ) ಈ ಕಾರ್ಖಾನೆಯ ಕಾರ್ಮಿಕರಿಗೆ ಕೆಲಸ ನೀಡಿ ಕಾರ್ಖಾನೆಯನ್ನು ಲಾಭದಾಯಕವಾಗಿ ನಡೆಸಲು ಸರ್ಕಾರವು ಯೋಚಿಸಿರುವ ಕ್ರಮಗಳೇನು?

ಉ) ಕಳೆದ ಹತ್ತು ವರ್ಷಗಳಿಂದ ಈ ಕಾರ್ಖಾನೆಗೆ ನೇಮಕಗೊಂಡ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಎಷ್ಟು? ಹೆಸರುಗಳೇನು (ವಿವರ ನೀಡುವುದು) ?

ಶ್ರೀ ಆರ್. ವಿ. ದೇಶ್‌ಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು.)

ಅ) 1945 ರಿಂದ ಖಾಸಗಿ ಆಡಳಿತದೊಂದಿಗೆ ಪ್ರಾರಂಭಗೊಂಡ ದಿನಾಂಕ 6-1-1979 ರಿಂದ ರಾಜ್ಯ ಸರ್ಕಾರದ ಅಧೀನಗಕ್ಕೊಳಪಟ್ಟಿತು.

ಆ) 641

ಇ) ಆರ್ಥಿಕ ಪರಿಸ್ಥಿತಿಯ ವಿವರಗಳು

(ಲಕ್ಷ ರೂ.ಗಳಲ್ಲಿ)

ವಿವರಗಳು	93-94	94-95	95-96 (ಡಿಸೆಂಬರ್ 96ರವರೆಗೆ)	1996-97
ಉತ್ಪಾದನೆ	1440.77	2019.81	2008.19	1178.77
ಮಾರಾಟ	1279.13	1813.89	2051.47	1481.06
ಲಾಭ ಮತ್ತು ನಷ್ಟ	(+)733.71	(+)7.15	(-)270.79	(-)241.28
ಕ್ರೋಡೀಕೃತವಾದ ನಷ್ಟ	159.88	152.73	423.52	664.80

ಈ) ಕಾರ್ಖಾನೆಯ ಪುನರ್‌ಸಜ್ಜೀಕರಣ ಮತ್ತು ವೈವಿದ್ಯತಾ ಯೋಜನೆ ಹಾಗೂ ಖಾಸಗೀಕರಣದ ಯೋಜನೆಯು ಸರ್ಕಾರದ ತೀವ್ರ ಪರಿಜಶೀಲನೆಯಲ್ಲಿದೆ.

ಉ) ಶ್ರೀಯುತರುಗಳಾದ

1.	ಫಲ್ಗುಣಿ ರಾಜ್‌ಕುಮಾರ್, ಭಾ.ಆ.ಸೇ. ಸಿ.ಎಂ.ಡಿ.	16-10-85 ರಿಂದ 17-02-1989
2.	ಸುಭೀರ್‌ವರಿಸಿಂಗ್, ಭಾ.ಆ.ಸೇ ಸಿ.ಎಂ. ಪಿ.	17-02-89 ರಿಂದ 23-05-1989
3.	ಆರ್. ಶಂಕರಪ್ಪ, ಭಾ.ಆ.ಸೇ	23-05-89 ರಿಂದ 28-05-1990
4.	ಜೆ. ಇ. ಜಾರ್ಜ್, ಐ.ಪಿ.ಎಸ್.	28-05-90 ರಿಂದ 19-11-1990
5.	ವಿಜಯ್ ಗೋರೆ, ಭಾ.ಆ.ಸೇ ಸಿ.ಎಂ.ಡಿ.	19-11-90 ರಿಂದ 07-12-1992
6.	ಎಂ. ಮಹೇಶನ್, ಭಾ.ಆ.ಸೇ. ಸಿ.ಎಂ.ಡಿ.	07-12-92 ರಿಂದ 28-10-1993.
7.	ಶ್ರೀಮತಿ ವೀಣಾ ಶ್ರೀರಾಮರಾವ್, ಭಾ.ಆ.ಸೇ. ಸಿ.ಎಂ.ಪಿ.	28-10-93 ರಿಂದ ಇಲ್ಲಿಯವರೆಗೆ

ವಿಷಯ : ಮಂಗಳೂರಿನ ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಉತ್ಪನ್ನವಾಗುವ ಪೆಟ್ರೋಲಿಯಂ ಉತ್ಪನ್ನ

1468 (1938)-ಶ್ರೀ ಡಿ. ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಮೂಲಭೂತ ಸೌಕರ್ಯಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಗಳೂರಿನ ಎಂ.ಆರ್.ಪಿ.ಎಲ್. ಸಂಸ್ಥೆಯಿಂದಉತ್ಪನ್ನವಾಗುವ ಪೆಟ್ರೋಲಿಯಂ ಉತ್ಪನ್ನಗಳನ್ನು ಹೆಚ್.ಪಿ.ಸಿ.ಎಲ್. ಸಂಸ್ಥೆ ನೆಲ ಮಾರ್ಗವಾಗಿ ಪೈಪ್ ಮುಖಾಂತರ ಬೆಂಗಳೂರಿಗೆ ರವಾನಿಸುವ ಯೋಜನೆ ಹೋಂದಿದೆಯೇ?

ಆ) ಹಾಗಿದ್ದಲ್ಲಿ ಸಾವಿರಾರು ಎಕರೆ ಕೃಷಿ ಹಾಗೂ ದಟ್ಟ ಅರಣ್ಯಗಳು ನಾಶವಾಗುವುದಿಲ್ಲವೇ.